



ಮನೆಗೆ ಬಂದಾಗ ಬಾಗಿಲ ಬಳಿ ಬಾ ನಿಂತು ಇಬ್ಬರನ್ನು ಕಾಯುತ್ತಿದ್ದರು. ಬಾಲಕರಾದ ದೇವದಾಸ ಮತ್ತು ರಾಮದಾಸ ಇಬ್ಬರೂ ಬಾ ಅವರಿಗೆ ತಾಗಿಕೊಂಡು ಅವರೊಂದಿಗೆ ನಿಂತಿದ್ದರು. ಹರಿಲಾಲ ಬಾ ಅವರ ಪಾದಸ್ಪರ್ಶ ಮಾಡಿ ನಮಸ್ಕರಿಸಿದ. ಬಾ ತುಂಬಿ ಬಂದ ಕಣ್ಣುಗಳಿಂದ ಮಗನ ತಲೆಯನ್ನು ನೇವರಿಸಿದರು.

'ಮಣಿಲಾಲ ಎಲ್ಲಿ?' ಮಣಿಲಾಲನನ್ನು ಕಾಣದೆ ಹರಿಲಾಲ ವಿಚಾರಿಸಿದ.

'ಅವನು ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳ ಸೇವೆಯನ್ನು ಮಾಡಲು ಹೋಗುತ್ತಿರುತ್ತಾನೆ. ಬಾಪೂ ಅವನಿಗೆ ಈ ಕೆಲಸವನ್ನು ವಹಿಸಿದ್ದಾರೆ. ಮಧ್ಯಾಹ್ನ ಮರಳಿ ಬರುತ್ತಾನೆ' ಪರಾಗರು ಸ್ಪಷ್ಟಪಡಿಸಿದರು.

'ರೋಗಿಗಳ ಸೇವೆ? ಮಣಿಲಾಲನಿಗೆ ಈ ವೈದ್ಯಗಿರಿ ಎಲ್ಲಿಂದ ಬಂತು?' ಹರಿಲಾಲನಿಗೆ ಆಶ್ಚರ್ಯವಾಯಿತು.

'ಇದಕ್ಕೆ ವೈದ್ಯಗಿರಿ ಕಲಿಯುವ ಅಗತ್ಯವೇನಿದೆ?' ಬಾ ಹೇಳಿದರು, 'ಮಣಿಲಾಲ ರೋಗಿಗಳ ಮೈಯನ್ನು ಒರೆಸುತ್ತಾನೆ... ಅವರಿಗೆ ಔಷಧಿಯನ್ನು ಕುಡಿಸುತ್ತಾನೆ...ಅವರ ಬಟ್ಟೆಗಳನ್ನು ಬದಲಾಯಿಸುತ್ತಾನೆ...ಇಂಥ ಕೆಲಸಗಳನ್ನು ಮಾಡುತ್ತಾ ಆಸ್ಪತ್ರೆಗೆ ಸಹಾಯವನ್ನು ಮಾಡುತ್ತಾನೆ.'

'ನೀವಿಬ್ಬರು ಸಹೋದರರು ಏನು ಮಾಡುತ್ತೀರ? ಶಾಲೆಗೆ ಹೋಗುತ್ತಿದ್ದೀರ? ಅಥವಾ ಮನೆಯಲ್ಲಿಯೇ ಶಿಕ್ಷಕರು ಬಂದು ಕಲಿಸುತ್ತಾರೋ?'

'ಭೈಯ್ಯಾ, ಬಾಪೂ ಅವರ ಗೈರುಹಾಜರಿಯಲ್ಲಿ ರಜವಿರುತ್ತದೆ' ದೇವದಾಸ ಹೇಳಿದ, 'ಬಾಪೂ ಅವರು ಯಾವ ದಿನ ಬಿಡುವಿನಲ್ಲಿರುವರೋ, ಆಗ ಅವರು ನಮಗೆ ಬೋಧಿಸುತ್ತಾರೆ. ಉಳಿದ ಸಮಯದಲ್ಲಿ ಫೀನಿಕ್ಸ್ ಆಶ್ರಮದ ಕೆಲಸಗಳನ್ನು...' 'ಹೂಂ, ಅಂಚೆ ಟಪಾಲುಗಳನ್ನು ತರುವ ಕೆಲಸ, ತೋಟಕ್ಕೆ ಪಂಪ್‌ನಿಂದ ನೀರು ಹಾಯಿಸುವುದು... ನೆಲವನ್ನು ಅಗೆದು ಸಮತಲಗೊಳಿಸುವುದು... ಕಮ್ಮಾರನ ಕೆಲಸ...ಈ ಕೆಲಸಗಳನ್ನೆಲ್ಲಾ ನಾವೇ ಮಾಡುತ್ತೇವೆ.' ರಾಮದಾಸ ವಾಕ್ಯವನ್ನು ಪೂರ್ಣಗೊಳಿಸಿದ, 'ಆಶ್ರಮದಲ್ಲಿರುವ ಕಿತ್ತಳೆ ಹಣ್ಣು ಎಷ್ಟು ರಸವತ್ತಾಗಿರುತ್ತದೆಂದರೆ...'

ಬಾ ಇಬ್ಬರು ಮಕ್ಕಳ ಸಮೀಪಕ್ಕೆ ಬಂದು ಅವರ ಬಾಯಿಯ ಮೇಲೆ ಕೈಯನ್ನಿಟ್ಟು ಹೇಳಿದರು, 'ಹರಿ, ನೀನು ಕೈಕಾಲು ತೊಳೆದು ವಿಶ್ರಾಂತಿ ಪಡೆ. ನಿನ್ನ ತಂದೆ ಸಂಜೆಯ ವೇಳೆಗೆ ಖಂಡಿತ ಮರಳಿ ಬರುತ್ತಾರೆ. ಅವರು ನಿನ್ನೆಯೇ ಬರಬೇಕಿತ್ತು, ಆದರೆ ಕೆಲಸವೊಂದರ ನಿಮಿತ್ತ ಉಳಿದುಕೊಂಡಿರಬೇಕು.'

ಸಂಜೆಯವರೆಗೆ ಹರಿಲಾಲ, ಬಾ ಮತ್ತು ಸಹೋದರರಿಂದ ಸಾಕಷ್ಟು ವಿಚಾರಗಳನ್ನು ಸಂಗ್ರಹಿಸಿದ್ದ. ಬಾಪೂ ಅವರ ಕಾರ್ಯಕ್ಷೇತ್ರ ಸಾಕಷ್ಟು ವಿಸ್ತಾರಗೊಂಡಿದೆ ಎಂದು ಅರ್ಥ ಮಾಡಿಕೊಳ್ಳುವಲ್ಲಿ ತಡವಾಗಲಿಲ್ಲ. ಬಾಪೂ ಅವರ ಧೈರ್ಯ ಮತ್ತು ಅಗಾಧ ಪರಿಶ್ರಮವನ್ನು ನೋಡಿ ಹರಿಲಾಲನಿಗೆ ಆಶ್ಚರ್ಯವಾಗಿತ್ತು. ಭಾರತೀಯರು ಮತ್ತು ಬ್ರಿಟಿಷರಿಂದ ಬಾಪೂ ಅವರಿಗೆ ದೊರೆತ ಗೌರವ, ಸ್ನೇಹವನ್ನು ಕಂಡು ಅವನಿಗೆ ಹೆಮ್ಮೆ ಮೂಡಿತು; ಅಲ್ಲದೆ ಇಂಥ ಬಾಪೂ ತನ್ನ ತಂದೆ ಎಂದು ಹರಿಲಾಲನಿಗೆ ಗರ್ವವುಂಟಾಯಿತು. ಫೀನಿಕ್ಸ್ ಆಶ್ರಮದ ಬಗ್ಗೆ ಕೇಳಿ ಅವನು ರೋಮಾಂಚನಗೊಂಡ. ಬಾಪೂ ತಮ್ಮ ಸ್ವಸಾಮರ್ಥ್ಯದಿಂದ ಪ್ರಾರಂಭಿಸಿದ 'ಇಂಡಿಯನ್ ಒಪೀನಿಯನ್' ಎಂಬ ಸಾಪ್ತಾಹಿಕದ ಬಗ್ಗೆ ಮಣಿಲಾಲ ಹೇಳಿದ ಸಂಗತಿಗಳನ್ನು ಕೇಳಿ, ಹರಿಲಾಲನ ಮನಸ್ಸಿನಲ್ಲಿ ತನ್ನನ್ನು ತಾನು ಫೀನಿಕ್ಸ್ ಆಶ್ರಮದ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕೆಂಬ ತೀವ್ರ ಇಚ್ಛೆ ಜಾಗೃತಗೊಂಡಿತು.

ಸಂಜೆ ವೇಳೆಗೆ ಬಾಪೂ ಬಂದರು, ಬಾಪೂ ಸೊರಗಿದ್ದು, ಅವರ ಮುಖದಲ್ಲಿ ದಣಿವಿರುವುದನ್ನು ಹರಿಲಾಲ ಗಮನಿಸಿದ. ಬಾಪೂ ಮಗನ ವಿಷಯಗಳನ್ನು ಕೇಳಿ ತಿಳಿದುಕೊಂಡರು. ಗುಲಾಬಳ ಬಗ್ಗೆ ಒಂದೆರಡು ಪ್ರಶ್ನೆಗಳನ್ನು ಕೇಳಿದರು. ಹರಿಲಾಲನ ವಿವಾಹದ ಬಗ್ಗೆ ಬಾಪೂ ಯಾವುದೇ ವಿಶೇಷ ವಿಚಾರಣೆಯನ್ನು ಮಾಡಲಿಲ್ಲ. ಆದರೆ ಹರಿಲಾಲ ವಿದ್ಯಾಭ್ಯಾಸದಲ್ಲಿ ವಿಶೇಷ ಉನ್ನತಿಯನ್ನು ಸಾಧಿಸದೆ ಇರುವುದನ್ನು ತಿಳಿದು ಬಾಪೂ ಹತಾಶರಾಗಿ ಹೇಳಿದರು, 'ಹೋಗಲಿ, ಇನ್ನು ಕೃತ್ರಿಮ ವಿದ್ಯಾಭ್ಯಾಸದ ಮೋಹವನ್ನು ಬಿಟ್ಟು ಬಿಡು, ಹರಿಲಾಲ! ಗುಣ ಸಂಪಾದನೆಯೇ ನಿಜವಾದ ಶಿಕ್ಷಣ.'

ಗುಣ ಸಂಪಾದನೆಯ ಶಿಕ್ಷಣದಿಂದ ಬಾಪೂ ಯಾವ ರೀತಿಯ ಶಿಕ್ಷಣವನ್ನು ಅಪೇಕ್ಷಿಸುತ್ತಿದ್ದಾರೆಂದು ಹರಿಲಾಲನಿಗೆ ತಿಳಿಯಲಿಲ್ಲ. 'ನಾಳೆ ನೀನು ನನ್ನ ಕಚೇರಿಗೆ ಬಂದು ಕೆಲಸವನ್ನು ನೋಡಿಕೋ' ಬಾಪೂ ತಮ್ಮ ನಿರ್ಧಾರವನ್ನು ಹೇಳಿದರು, 'ದೇಶದ ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳುತ್ತಾ ಹೋದಂತೆ ಹೊಸಹೊಸ ದೃಷ್ಟಿಯ ಸಾಕ್ಷಾತ್ಕಾರವಾಗುವುದು.'

ಮರುದಿನದಿಂದ ಹರಿಲಾಲ ಬಾಪೂ ಅವರ ಕಚೇರಿಗೆ ಹೋಗಲು ಆರಂಭಿಸಿದ. ಬಾಪೂ ಅವರ ಕಚೇರಿಯಲ್ಲಿ ಎರಡು ಭಾಗಗಳಲ್ಲಿ ಕೆಲಸವನ್ನು ಮಾಡಲಾಗುತ್ತಿತ್ತು. ಒಂದು ಕಡೆ ವ್ಯವಹಾರಕ್ಕೆ ಸಂಬಂಧಿಸಿದ ವಿಷಯಗಳ ಕಾಗದ ಪತ್ರಗಳು ಮತ್ತು ಫೈಲ್‌ಗಳಿದ್ದರೆ, ಇನ್ನೊಂದೆಡೆ ಹೋರಾಟಕ್ಕೆ ಸಂಬಂಧಿಸಿದ ಪತ್ರವ್ಯವಹಾರಗಳ ರಾಶಿರಾಶಿ ಫೈಲ್‌ಗಳಿದ್ದವು. ಬೆಳಿಗ್ಗೆಯಿಂದ ಹಿಡಿದು ತಡರಾತ್ರಿಯವರೆಗೆ ಭೇಟಿ ಮಾಡುವವರ ಸಾಲು ಜಮಾಯಿಸಿರುತ್ತಿತ್ತು. ಹರಿಲಾಲ ಆಸಕ್ತಿಯಿಂದ ತನ್ನ ಕೆಲಸದಲ್ಲಿ ತೊಡಗಿದ. ಆಂಗ್ಲ ಭಾಷೆಯನ್ನು ಅರ್ಥ ಮಾಡಿಕೊಳ್ಳಲು ಮತ್ತು ಕಲಿಯನ್ನು ಹೆಚ್ಚಿ ಪ್ರಯತ್ನವನ್ನು ಆರಂಭಿಸಿದ. ಇತ್ತೀಚೆಗಷ್ಟೇ ಬಾಪೂ ಅವರು ಖರೀದಿಸಿದ ಚಿಕ್ಕ ಟೈಪರೇಟರ್‌ನಲ್ಲಿ ಅವನೂ ಬೆರಳನ್ನಾಡಿಸಿ, ಪರೀಕ್ಷಿಸಲು ಆರಂಭಿಸಿದ. ಹರಿಲಾಲ 'ಇಂಡಿಯನ್ ಒಪೀನಿಯನ್' ಅಂಕಗಳನ್ನು ತದೇಕಚಿತ್ತದಿಂದ ಓದಿದ. ಬಾಪೂ ಅವರ ಕೆಲಸ ಕಾರ್ಯಗಳಿಗೆ ಸಂಬಂಧಿಸಿದ ಪತ್ರಗಳು ಮತ್ತು ಹೋರಾಟಕ್ಕೆ ಸಂಬಂಧಿಸಿದ ಪತ್ರಗಳನ್ನು ಬೇರೆಬೇರೆ ಮಾಡಿ ಅವುಗಳನ್ನು ವ್ಯವಸ್ಥಿತವಾಗಿ ಫೈಲ್‌ಗಳಲ್ಲಿಟ್ಟ; ಪ್ರತಿಯೊಂದು ವಿಷಯವನ್ನು ಅರಿಯಲು ಅದರ ಆಳಕ್ಕಿಳಿದ. ಈ ನಡುವೆ ಅವನು ಫೀನಿಕ್ಸ್ ಆಶ್ರಮಕ್ಕೆ ಹೋದ. ಅಲ್ಲಿಯ ಮುದ್ರಣ ಯಂತ್ರಗಳನ್ನು ಮತ್ತು 'ಇಂಡಿಯನ್ ಒಪೀನಿಯನ್' ಕಾರ್ಯಾಲಯದಲ್ಲಿ ಕೆಲಸ ಮಾಡುವ ಆಶ್ರಮವಾಸಿಗಳನ್ನು ನೋಡಿದ;

ಆಗ ಅವನಿಗೆ ವಿಚಿತ್ರವಾಗಿ ಕಂಡಿತು. ಅಲ್ಲಿ ಅನೇಕ ಬಾರಿ ಉಪ್ಪಿಲ್ಲದೆ ಅಡುಗೆಯನ್ನು ತಯಾರಿಸಲಾಗುತ್ತಿತ್ತು; ಒಮ್ಮೊಮ್ಮೆ ಸಕ್ಕರೆ ಮತ್ತು ಬೆಲ್ಲದ ಮೇಲೆ ನಿರ್ಬಂಧವನ್ನು ಹಾಕಲಾಗುತ್ತಿತ್ತು. ಒಮ್ಮೊಮ್ಮೆ ರಾತ್ರಿ ಕಪ್ಪು ಚಹಾ ಮತ್ತು ಬ್ರೆಡ್ ಮಾತ್ರ ಊಟಕ್ಕೆ ಪ್ರತಿಯಾಗಿ ಲಭಿಸುತ್ತಿತ್ತು. ಒಂದೊಂದು ದಿನ ರಜ ದಿನಗಳನ್ನು ಹೊರತುಪಡಿಸಿ ಕಿತ್ತಳೆ, ಅಲೂಚಾ ಮತ್ತು ಇನ್ನಿತರ ಹಣ್ಣುಗಳೇ ಆಹಾರವಾಗುತ್ತಿದ್ದವು. ಬಾಪೂ ಎಲ್ಲರ ನಡುವೆ ಕೂತು ಹೊಸಹೊಸ ಪ್ರಯೋಗಗಳನ್ನು ಮಾಡುತ್ತಿದ್ದರು ಹಾಗೂ ಬೇರೆಯವರಿಂದಲೂ ಮಾಡಿಸುತ್ತಿದ್ದರು. ಬಾಪೂ ಉಪ್ಪಿಲ್ಲದ ಆಹಾರವನ್ನು ಸಹಜವಾಗಿ ಸೇವಿಸುತ್ತಿದ್ದರು, ಇದನ್ನು ನೋಡಿ ಹರಿಲಾಲನಿಗೆ ತುಂಬಾ ಆಶ್ಚರ್ಯವಾಗುತ್ತಿತ್ತು. ಬಾಪೂ ಸಕ್ಕರೆ ಮತ್ತು ಹಾಲು ಇಲ್ಲದ ಕಪ್ಪು ಚಹಾದಲ್ಲಿ ಬ್ರೆಡ್‌ನ ಚೂರುಗಳನ್ನು ಅದ್ದಿ ಅದ್ದಿ, ಸ್ವಾದಿಷ್ಟವಾಗಿ ತಮಗಿಷ್ಟವಾದ ಸಿಹಿಯನ್ನು ತಿನ್ನುವಂತೆ ತಿನ್ನುತ್ತಿದ್ದರು. ಆದರೆ...

ಆಶ್ರಮವಾಸಿಗಳಿಗೆ ಇಂಥ ಆಹಾರವನ್ನು ಸೇವಿಸುವುದು ಅಷ್ಟು ಸುಲಭವಲ್ಲ ಎಂಬುದನ್ನು ಹರಿಲಾಲ ಗಮನಿಸಿದ. ಬಾಪೂ ಅವರ ಆದೇಶವನ್ನು ಪಾಲಿಸುವುದಕ್ಕಾಗಿ ಎಲ್ಲರೂ ಆ ಬಗ್ಗೆ ಮಾತನಾಡದೆ ಆ ನಿಯಮಗಳನ್ನು ಪಾಲಿಸುತ್ತಿರುವುದನ್ನು ಹರಿಲಾಲ ನೋಡಿದ. ಆದರೆ ಬಾಪೂ ಅವರ ಗೈರುಹಾಜರಿಯಲ್ಲಿ ಆಶ್ರಮವಾಸಿಗಳ ವರ್ತನೆಯನ್ನು ಕಂಡ ಹರಿಲಾಲ ಆಶ್ಚರ್ಯಗೊಂಡ.

ಬಾಲಕ ದೇವದಾಸ ಭೋಜನದೊಂದಿಗೆ ಸಿಹಿ ಬೇಕೆಂದು ಆಗ್ರಹಿಸುತ್ತಿದ್ದ. ಕೆಲವು ದಿನ ಬಾ ಅವನಿಗೆ ಆಶ್ರಮದ ನಿಯಮಗಳಿಗೆ ಅನುಸಾರವಾಗಿ ಬೆಲ್ಲ ಮತ್ತು ಸಕ್ಕರೆ ಇಲ್ಲದ ಅಡುಗೆಯನ್ನು ಮಾಡಿ ತಿನ್ನಿಸಿದರು, ಆದರೆ ದೇವದಾಸ ಹಟ ಮಾಡಿ, ಎರಡು ಅಗಳು ಅನ್ನ ತಿಂದು, ಹಸಿದು ಎದ್ದು ಬಿಡುತ್ತಿದ್ದ. ಅಂದು ಬಾ ಬಡಿಸಿದ ಊಟ ಹಾಗೆಯೇ ಉಳಿದು ಬಿಡುತ್ತಿತ್ತು. ಬಾ ಸಹ ನೆಪಕ್ಕೆ ತಿಂದು ಎದ್ದು ಬಿಡುತ್ತಿದ್ದರು. ದೇವದಾಸನಿಗೆ ಎಷ್ಟೇ ತಿಳಿವಳಿಕೆ ಹೇಳಿದರೂ ಅವನ ಬಾಲ್ಯದ ಹಟ ಮುಂದುವರೆದಿತ್ತು. ಕಡೆಗೆ ಬಾ ಅವನ ಊಟದ ತಟ್ಟೆಗೆ ಸ್ವಲ್ಪ ಸಕ್ಕರೆಯನ್ನು ಹಾಕಿದರು. ಅಂದು ದೇವದಾಸ, ತನಗೆ ಮೂರು ಲೋಕವೇ ಸಿಕ್ಕಿದಂಥ ಸಂತಸದಲ್ಲಿ ಊಟವನ್ನು ಮಾಡಿದ; ಅವನು ಊಟ ಮಾಡುವುದನ್ನು ನೋಡಿ ಬಾ ಅವರ ಕಣ್ಣುಗಳು ತುಂಬಿ ಬಂದವು. ದೇವದಾಸ ಅನೇಕ ದಿನಗಳ ನಂತರ ಹೊಟ್ಟೆ ತುಂಬಾ ಊಟವನ್ನು ಮಾಡುತ್ತಿದ್ದ. ನಂತರದಲ್ಲಿ ಬಾ ದೇವದಾಸನ ಊಟಕ್ಕೆ ತಪ್ಪದೆ ಸ್ವಲ್ಪ ಸಕ್ಕರೆಯನ್ನು ಹಾಕುತ್ತಿದ್ದರು.

ಬಾಪೂ ಅವರಿಗೆ ಈ ವಿಷಯ ತಡವಾಗಿ